# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2755 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 28.03.2022 |
| ಉತ್ತರಿಸುವ ಸಚಿವರು | : | ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಭತ್ತ ಖರೀದಿಗೆ ಕೇಂದ್ರ ಸರ್ಕಾರದಿಂದ ನೀಡಿರುವ 50 ಲಕ್ಷ ಕ್ವಿಂಟಾಲ್ ಅವಕಾಶವನ್ನು 25 ಲಕ್ಷ ಕ್ವಿಂಟಾಲ್‌ಗೆ ಮೊಟಕುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರೈತರ ನೋಂದಣಿ ಮಾರ್ಚ್ 2022ರವರೆಗೆ ವಿಸ್ತರಿಸುವುದು ಸೂಕ್ತವಲ್ಲವೇ; | ಕೇಂದ್ರ ಸರ್ಕಾರವು ಅನುಮತಿಸಿರುವಂತೆ 2021-22ನೇ ಸಾಲಿನ ಮುಂಗಾರು ಋತುವಿನಲ್ಲಿ ರಾಜ್ಯದ ರೈತರಿಂದ 5.00 ಲಕ್ಷ ಮೆ.ಟನ್ (50.00 ಲಕ್ಷ ಕ್ವಿಂಟಾಲ್) ಭತ್ತವನ್ನು ಖರೀದಿಸಲಾಗುತ್ತಿದೆ. ಅದರಂತೆ, ಭತ್ತವನ್ನು ಮಾರಾಟ ಮಾಡುವ ರೈತರ ನೋಂದಣಿ ದಿನಾಂಕ:28.02.2022ರವರೆಗೆ ನಿಗಧಿಪಡಿಸಲಾಗಿದ್ದು, ಈ ಅವಧಿಯಲ್ಲಿ 2.70 ಲಕ್ಷ ಮೆ.ಟನ್ ಭತ್ತವನ್ನು ಮಾರಾಟ ಮಾಡಲು ರೈತರು ನೊಂದಣಿ ಮಾಡಿಕೊಂಡಿರುತ್ತಾರೆ. ನಿಗಧಿತ ಅವಧಿಯಲ್ಲಿ 5.00 ಲಕ್ಷ ಮೆ.ಟನ್ ಭತ್ತವನ್ನು ಮಾರಾಟ ಮಾಡಲು ರೈತರು ನೊಂದಣಿ ಮಾಡಿಕೊಳ್ಳದಿರುವುದನ್ನು ಪರಿಗಣಿಸಿ ರೈತರ ನೊಂದಣಿ ಅವಧಿಯನ್ನು ದಿನಾಂಕ: 25.03.2022 ರವರೆಗೆ ವಿಸ್ತರಿಸಲಾಗಿದೆ. |
| ಆ | ಹಾಗಿದ್ದಲ್ಲಿ, ರಾಗಿ ಖರೀದಿ ಬಗ್ಗೆ ರೈತರ ನೋಂದಣಿಯನ್ನು ಮಾರ್ಚ್ 30, 2022ರವರೆಗೆ ವಿಸ್ತರಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದೇ; | 2021-22ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ 2.10 ಲಕ್ಷ ಮೆ.ಟನ್ ರಾಗಿಯನ್ನು ಖರೀದಿಸಲು ಕೇಂದ್ರ ಸರ್ಕಾರವು ಅನುಮತಿಸಿದೆ. ಅದರಂತೆ 2.10 ಲಕ್ಷ ಮೆ.ಟನ್ ರಾಗಿಯನ್ನು ಮಾರಾಟ ಮಾಡಲು 136322 ರೈತರು ನೋಂದಣಿ ಮಾಡಿಕೊಂಡಿರುವ ಹಿನ್ನಲೆಯಲ್ಲಿ ಪ್ರಸ್ತುತ ರೈತರ ನೋಂದಣಿ ಕಾರ್ಯವನ್ನು ಸ್ಥಗಿತಗೊಳಿಸಲಾಗಿದ್ದು, ನೋಂದಾಯಿತ ರೈತರಿಂದ ರಾಗಿ ಖರೀದಿ ಕಾರ್ಯವು ದಿನಾಂಕ:30.03.2022 ರವರೆಗೆ ಜಾರಿಯಲ್ಲಿರುತ್ತದೆ. |

| | | |
|---|---|---|
| | | ಈಗಾಗಲೇ ಕೇಂದ್ರ ಸರ್ಕಾರವು ನಿಗಧಿಪಡಿಸಿರುವ 2.10 ಲಕ್ಷ ಮೆ.ಟನ್ ಪ್ರಮಾಣದ ರಾಗಿಯನ್ನು ಮಾರಾಟ ಮಾಡಲು ರೈತರು ನೊಂದಣಿ ಮಾಡಿಕೊಂಡಿರುವ ಹಿನ್ನಲೆಯಲ್ಲಿ ರಾಗಿ ಖರೀದಿಗೆ ಸಂಬಂಧಿಸಿದಂತೆ ರೈತರ ನೋಂದಣಿಯನ್ನು ವಿಸ್ತರಿಸುವ ಪ್ರಸ್ತಾವನೆ ಇರುವುದಿಲ್ಲ. |

ಆನಾಸ 83 ಆರ್‌ಪಿಆರ್ 2022 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.